**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿನಾಂಕಃ 16-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಡಿ.ಎನ್.ಕೆ., 11 ರಿಂದ 24 ನೇ ಪ್ರತಿವಾದಿಯರ ಪರ ವಕೀಲರಿಂದಃ**

1. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುತ್ತದೆ. ಸದರಿ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ಗೌಸುಸಾಬ ಅಕ್ಕಿ ನನಗೆ ತಂದೆಯಾಗಬೇಕು. ಸದರಿಯವರಿಗೆ ಒಟ್ಟು ಏಳು ಜನ ಮಕ್ಕಳು. ಗೌಸುಸಾಬ ಅಕ್ಕಿರವರಿಗೆ ಮೂರು ಜನ ಮಕ್ಕಳು ಎಂದರೆ ಸಾಕ್ಷಿಯು ಏಳು ಜನ ಮಕ್ಕಳು ಎಂದು ನುಡಿಯುತ್ತಾರೆ. ಸದರಿಯವರಿಗೆ ಮಕ್ಬೂದಗೌಸ, ಮಕ್ಬೂದಹನೀಪ ಮತ್ತು ಜುಲೈಕಾಬಿ ಎಂಬ ಮೂರು ಜನರ ಮಕ್ಕಳು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಮಕ್ಬೂದಗೌಸ, ಮಕ್ಬೂದಹನೀಪ ಮತ್ತು ಜುಲೈಕಾಬಿರವರು ಸಹೋದರ – ಸಹೋದರಿ ಎಂದು ಹೇಳಿ ಬರೆಸಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

**2.** ಸರ್ವೆ ನಂಬರ 14 ರಲ್ಲಿ 16 ಎಕರೆ 10 ಗುಂಟೆ ಜಮೀನು ರೈತಾಪಿ ನಾತೆಯಿಂದ ಭೂ ನ್ಯಾಯ ಮಂಡಳಿಯಿಂದ ಬಂದಂತಹ ಜಮೀನು ಎಂದರೆ ಸಾಕ್ಷಿಯು ಇಲ್ಲ, ನನ್ನ ತಂದೆಯವರ ಆಸ್ತಿ ಎಂದು ನುಡಿಯುತ್ತಾರೆ. ಸದರಿ 16 ಎಕರೆ 10 ಗುಂಟೆ ಜಮೀನಿನಲ್ಲಿ ನನ್ನ ತಂದೆ ತನ್ನ ಜೀವಿತ ಅವಧಿಯಲ್ಲಿ ತನ್ನ ಮೂರು ಮಕ್ಕಳಾದ ಮಕ್ಬೂದಗೌಸ, ಮಕ್ಬೂದಹನೀಪ ಮತ್ತು ಜುಲೈಕಾಬಿರವರ ಮಕ್ಕಳಾದ 19 ರಿಂದ 24 ನೇ ಪ್ರತಿವಾದಿಯರ ನಡುವೆ 1992 ರಲ್ಲಿ ಪಾಲು ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ವಾಟ್ನಿಪತ್ರ ಮಾಡುವ

ಸಮಯದಲ್ಲಿ ನನ್ನ ತಂದೆಯವರು 1992 ರಲ್ಲಿ ಪಂಚರ ಸಮಕ್ಷಮ ವಾಟ್ನಿ ಪತ್ರ ಮಾಡಿ ನನ್ನ ತಂದೆಯವರು ಸಹಿ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ 14/3 ರಲ್ಲಿ ಮಹ್ಮದಗೌಸರವರಿಗೆ 06 ಎಕರೆ 34 ಗುಂಟೆ ಹಿಸ್ಸೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ 14/1 ರಲ್ಲಿ 03 ಎಕರೆ 20 ಗುಂಟೆ ಜಮೀನು ಮಹ್ಮದಹನೀಪರವರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ 14/2,4,5,6 ಮತ್ತು 07 ಇವುಗಳು ಜುಲ್ಪೈಕಾಬಿರವರ ಮಕ್ಕಳಾದ 19 ರಿಂದ 24 ನೇ ಪ್ರತಿವಾದಿಯರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಈ ಎಲ್ಲಾ ಆಸ್ತಿಗಳು 1992 ರಲ್ಲಿ ಹಿಸ್ಸೆಯಾಗಿ ಅವರವರ ಹೆಸರಿನಲ್ಲಿ ದಾಖಲಾಗಿ, ಅವರವರ ಹಿಸ್ಸೆಯಲ್ಲಿ ಅವರೇ ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

(ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಮುಂದಿನ ದಿನಾಂಕವನ್ನು ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

–ಸಹಿ–

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.